# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)**

ಬೆವಿಕಂ
BESCOM

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು –01

**ಓದಲಾಗಿದೆ:-**

ಬೆವಿಕಂ ನಿರ್ದೇಶಕರ ಮಂಡಳಿ ಸಭೆ ಠರಾವು ಸಂಖ್ಯೆ: 80/A01 ದಿನಾಂಕ: 26.11.2016

**ಪ್ರಸ್ತಾವನೆ:**

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿನ ಒಟ್ಟು ವಿದ್ಯುತ್ ಗ್ರಾಹಕರಲ್ಲಿ ಶೇ 52 ಗ್ರಾಹಕರು ಬೆಂಗಳೂರು ಮಹಾನಗರ ಕ್ಷೇತ್ರ ವ್ಯಾಪ್ತಿಯಲ್ಲಿರುತ್ತಾರೆ ಹಾಗೂ ಶೇ 60 ರಷ್ಟು ಕಂಪನಿಯ ಕಂದಾಯವು ಈ ವಲಯದಿಂದ ಬರುತ್ತಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಕೈಗಾರಿಕೆಗಳನ್ನೊಳಗೊಂಡಂತೆ ಇತರೆ ಪ್ರಮುಖ ಕೈಗಾರಿಕೆಗಳು ಸ್ಥಾಪಿಸಲಾಗುತ್ತಿರುವ ಹಿನ್ನಲೆಯಲ್ಲಿ ಗ್ರಾಹಕರ ಸಂಖ್ಯೆ ಸತತವಾಗಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವುದರಿಂದ ವಿದ್ಯುತ್ ಗ್ರಾಹಕರ ಹಿತದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ಕಾರಣಗಳಿಂದಾಗಿ ಬೆಂಗಳೂರು ಮಹಾನಗರ ಕ್ಷೇತ್ರ ವಲಯವನ್ನು ಪುನರ್ರಚಿಸುವ ಮೂಲಕ ಅಧಿಕವಾಗಿ ಮತ್ತೊಂದು ವಲಯವನ್ನು ರಚಿಸಲು ದಿನಾಂಕ: 26.11.2016 ರಂದು ನಡೆದ 80ನೇ ಬೆವಿಕಂ ನಿರ್ದೇಶಕ ಮಂಡಳಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಸದರಿ ನಿರ್ಣಯವನ್ನು ಜಾರಿಗೊಳಿಸಲು ಈ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ: ಬೆವಿಕಂ/ಬಿಸಿ31/35/2016-17/721** **ದಿನಾಂಕ:** 30 DEC 2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಾನುಸಾರ, 80ನೇ ಬೆವಿಕಂ ನಿರ್ದೇಶಕ ಮಂಡಳಿ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ, ಬೆಂಗಳೂರು ಮಹಾನಗರ ಕ್ಷೇತ್ರ ವಲಯವನ್ನು ಪುನರ್ರಚಿಸಲು ಹಾಗೂ ಅಧಿಕವಾಗಿ ಮತ್ತೊಂದು ವಲಯವನ್ನು ರಚಿಸಲು ಕೆಳಕಂಡ ಪ್ರಸ್ತಾವನೆಗಳಿಗೆ ಕಂಪನಿ ಅನುಮೋದನೆ ನೀಡಲಾಗಿದೆ:-

1. ಹಾಲಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಮಹಾನಗರ ಕ್ಷೇತ್ರ ವಲಯವನ್ನು ಪುನರ್ರಚಿಸುವ ಮೂಲಕ ಅಧಿಕವಾಗಿ ಮತ್ತೊಂದು ಕಾರ್ಯ ಮತ್ತು ಪಾಲನಾ ವಲಯ ರಚಿಸಲು ಅನುಮೋದನೆ ನೀಡಲಾಗಿದೆ. ಪುನರ್ರಚನೆ ನಂತರದ ಕಾರ್ಯ ಮತ್ತು ಪಾಲನಾ ವಲಯಗಳನ್ನು ಬೆಂಗಳೂರು ಮಹಾನಗರ ಕ್ಷೇತ್ರ ದಕ್ಷಿಣ ವಲಯ ಮತ್ತು ಬೆಂಗಳೂರು ಮಹಾನಗರ ಕ್ಷೇತ್ರ ಉತ್ತರ ವಲಯ ಎಂದು ಹೆಸರಿಸಲಾಗಿದೆ. ಸದರಿ ಕಛೇರಿಗಳ ಕಾರ್ಯ ವ್ಯಾಪ್ತಿಯು ಕೆಳಗಿನಂತಿರುತ್ತದೆ:-

| ಕ್ರ. ಸಂ | ವಲಯದ ಹೆಸರು | ಕಾರ್ಯ ವ್ಯಾಪ್ತಿಗೆ ಒಳಪಡುವ ಕಾರ್ಯ ಮತ್ತು ಪಾಲನಾ ವೃತ್ತಗಳು |
|---|---|---|
| 1 | ಬೆಂಗಳೂರು ಮಹಾನಗರ ಕ್ಷೇತ್ರ ದಕ್ಷಿಣ ವಲಯ | ಬೆಂಗಳೂರು ದಕ್ಷಿಣ ಕಾರ್ಯ ಮತ್ತು ಪಾಲನಾ ವೃತ್ತ ಮತ್ತು ಬೆಂಗಳೂರು ಪಶ್ಚಿಮ ಕಾರ್ಯ ಮತ್ತು ಪಾಲನಾ ವೃತ್ತ |
| 2 | ಬೆಂಗಳೂರು ಮಹಾನಗರ ಕ್ಷೇತ್ರ ಉತ್ತರ ವಲಯ | ಬೆಂಗಳೂರು ಪೂರ್ವ ಕಾರ್ಯ ಮತ್ತು ಪಾಲನಾ ವೃತ್ತ ಮತ್ತು ಬೆಂಗಳೂರು ಉತ್ತರ ಕಾರ್ಯ ಮತ್ತು ಪಾಲನಾ ವೃತ್ತ |

--2

2. ಈ ಆದೇಶದನ್ವಯ ಅಧಿಕವಾಗಿ ರಚಿಸಲಾಗಿರುವ ಕಾರ್ಯ ಮತ್ತು ಪಾಲನಾ ವಲಯ ಕಛೇರಿಗೆ ಒಟ್ಟು 45 ವಿವಿಧ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಇವುಗಳಲ್ಲಿ 19 ಹುದ್ದೆಗಳನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ವಲಯ ಕಛೇರಿಯಿಂದ ಸ್ಥಳಾಂತರಿಸುವುದು, ಉಳಿದ 26 ಹುದ್ದೆಗಳನ್ನು ಹೊಸದಾಗಿ ಸೃಜಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

3 ಬೆಂಗಳೂರು ಮಹಾನಗರ ಕ್ಷೇತ್ರ ದಕ್ಷಿಣ ವಲಯ ಮತ್ತು ಬೆಂಗಳೂರು ಮಹಾನಗರ ಕ್ಷೇತ್ರ ಉತ್ತರ ವಲಯ ಕಛೇರಿಗಳನ್ನು ಕ್ರಮವಾಗಿ ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಉತ್ತರ ವ್ಯಾಪ್ತಿಯಲ್ಲಿ ತೆರೆಯುವುದು.

4. ಸ್ಥಳಾಂತರಿಸಿರುವ ಹಾಗೂ ಹೊಸದಾಗಿ ಸೃಜಿಸಲಾದ 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳನ್ನು ಭರ್ತಿ ಮಾಡಲು ಮೂಲ ಕಾರ್ಯ ಮತ್ತು ಪಾಲನಾ ವಲಯದ ಮುಖ್ಯ ಇಂಜಿನಿಯರ್(ವಿ) ರವರು ಸೂಕ್ತ ಕ್ರಮ ಕೈಗೊಳ್ಳುವುದು.

5. ಕಛೇರಿ ದೈನಂದಿನ ನಿರ್ವಹಣೆಗಾಗಿ ಕಂಪ್ಯೂಟರ್ ಅಗತ್ಯತೆಯನ್ನು ಪರಿಶೀಲಿಸಿ ಒದಗಿಸಲು ಪ್ರಧಾನ ವ್ಯವಸ್ಥಾಪಕರು(ಐ.ಸಿ.ಟಿ ಮತ್ತು ಎಂ.ಐ.ಎಸ್), ಕಂಪನಿ ಕಾರ್ಯಾಲಯ ರವರು ಸೂಕ್ತ ಕ್ರಮ ಕೈಗೊಳ್ಳುವುದು.

6. ನೂತನವಾಗಿ ರಚಿಸಲಾಗಿರುವ ಕಾರ್ಯ ಮತ್ತು ಪಾಲನಾ ವಲಯ ಕಛೇರಿ ಕಾರ್ಯಾರಂಭಿಸಲು ಮೂಲ ಕಾರ್ಯ ಮತ್ತು ಪಾಲನಾ ವಲಯದ ಮುಖ್ಯ ಇಂಜಿನಿಯರ್(ವಿ) ರವರು ಕೆಳಕಂಡ ಸೌಲಭ್ಯವನ್ನು ವ್ಯವಸ್ಥೆ ಮಾಡಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು:-
   - ➢ ಕಛೇರಿ ಕಾರ್ಯಾರಂಭಿಸಲು ಸೂಕ್ತ ಕಟ್ಟಡದ ವ್ಯವಸ್ಥೆ ಒದಗಿಸುವುದು.
   - ➢ ದೈನಂದಿನ ಕೆಲಸಗಳ ನಿರ್ವಹಣೆಗಾಗಿ ಅಗತ್ಯ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡುವುದು.
   - ➢ ಮಂಜೂರು ಮಾಡಲಾಗಿರುವ ಹಾಗೂ ಸ್ಥಳಾಂತರಿಸಿರುವ ಹುದ್ದೆಗಳನ್ನು ಹೊರತುಪಡಿಸಿ ಇತರೆ ಯಾವುದೇ ಸೇವೆ ಅವಶ್ಯಕವಿದ್ದಲ್ಲಿ ಅಂತಹ ಸೇವೆಗಳನ್ನು ನೊಂದಾಯಿತ ಮ್ಯಾನ್ ಪವರ್ ಏಜೆನ್ಸಿ ಯಿಂದ ಚಾಲ್ತಿಯಲ್ಲಿರುವ ನಿಯಮಗಳನ್ನು ಪಾಲಿಸುವುದರೊಂದಿಗೆ ಒದಗಿಸುವುದು.

7. ಕಂಪನಿಯಲ್ಲಿ ಹಾಲಿ ಚಾಲ್ತಿಯಲ್ಲಿರುವ ನಿಯಮಗಳನುಸಾರ ವಾಹನ ಸೌಲಭ್ಯ ಪಡೆಯುವುದು.

8. ಈ ಆದೇಶದಲ್ಲಿ ನೂತನವಾಗಿ ರಚಿಸಲಾಗಿರುವ ಕಾರ್ಯ ಮತ್ತು ಪಾಲನಾ ವಲಯ ಕಛೇರಿಯನ್ನು ದಿನಾಂಕ: 01.01.2017 ರಿಂದ ಚಾಲನೆಗೊಳಿಸುವುದು.

**ಆದೇಶದ ಮೇರೆಗೆ,**

**ಪ್ರಧಾನ ವ್ಯವಸ್ಥಾಪಕರು(ಆ. ಮತ್ತು ಮಾ.ಸಂ.),**
**ಅಧಿಕ ಪ್ರಭಾರ**
**ಬೆ.ವಿ.ಕಂ., ಬೆಂಗಳೂರು.**

**ಪ್ರತಿಗಳು:-**

1. ಕಂಪನಿ ಕಾರ್ಯದರ್ಶಿ, ಕಂಪನಿ ಕಾರ್ಯಾಲಯ, ಬೆವಿಕಂ., ಬೆಂಗಳೂರು.

2. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಬೆವಿಕಂ.
4. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ಬೆವಿಕಂ.
6. ಅಧೀಕ್ಷಕ ಇಂಜಿನಿಯರ್(ವಿ), ಕಂಪ್ಯೂಟರ್ ಸೆಂಟರ್, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
7. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಬೆವಿಕಂ.
8. ಪೊಲೀಸ್ ಅಧೀಕ್ಷಕರು, ಜಾಗೃತದಳ, ಕಂಪನಿ ಕಾರ್ಯಾಲಯ, ಬೆವಿಕಂ., ಬೆಂಗಳೂರು.
9. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಬೆವಿಕಂ.
10. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಡಳಿತ), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
11. ವ್ಯವಸ್ಥಾಪಕರು, ಸಿಬ್ಬಂದಿ-1, 2 ಮತ್ತು ಸ್ಥಿರಾಸ್ತಿ/ಲೆಕ್ಕಾಧಿಕಾರಿ, ಕಂಪ್ಯೂಟರ್ ಶಾಖೆ, ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
12. ಎಲ್ಲಾ ಅಧಿಕಾರಿಗಳು, ಕಂಪನಿ ಕಾರ್ಯಾಲಯ, ಬೆವಿಕಂ., ಬೆಂಗಳೂರು.
13. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಬೆಂ.ಮ.ಕ್ಷೇ.ವಲಯ, ವ್ಯಾಪ್ತಿ ಬೆವಿಕಂ.
14. ಎಲ್ಲಾ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನೆ/(ಅಂ.ಪ), ಬೆಂ.ಮ.ಕ್ಷೇ.ವಲಯ, ವ್ಯಾಪ್ತಿ ಬೆವಿಕಂ.
15. ಆಪ್ತ ಕಾರ್ಯದರ್ಶಿಗಳು: ನಿರ್ದೇಶಕರು(ಆ ಮತ್ತು ಮಾ.ಸಂ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು-560009.
16. ಆಪ್ತ ಕಾರ್ಯದರ್ಶಿಗಳು: ವ್ಯ(ನಿ)/ನಿ(ತಾ)/ನಿ(ಹ), ಕಂಪನಿ ಕಾರ್ಯಾಲಯ, ಬೆವಿಕಂ., ಬೆಂಗಳೂರು.
17. ಮುಖ್ಯ ಕಡತ.

**ಪ್ರತಿಗಳು ಮಾಹಿತಿಗಾಗಿ:-**

1. ಶ್ರೀ. ಎಂ.ನಾಗರಾಜ್, ಅಧ್ಯಕ್ಷರು, ಕ.ವಿ.ಪ್ರ.ನಿ. ನೌಕರರ ಸಂಘ, ಅನಂದರಾವ್ ವೃತ್ತ, ಬೆಂಗಳೂರು.
2. ಶ್ರೀ. ಎ.ಎನ್. ಜಯರಾಜ್, ಅಧ್ಯಕ್ಷರು, ಕೆ.ಇ.ಬಿ. ಇಂಜಿನಿಯರುಗಳ ಸಂಘ, ಅನಂದರಾವ್ ವೃತ್ತ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ. ನೌಕರರ ಸಂಘ/ಕ.ವಿ.ಮಂ ಇಂಜಿನಿಯರುಗಳ ಸಂಘ/ಕ.ವಿ.ಪ್ರ.ನಿ.ನಿ., ಲೆಕ್ಕಾಧಿಕಾರಿಗಳ ಸಂಘ/ಕ.ವಿ.ಪ್ರ.ನಿ.ನಿ., ಪ.ಜಾತಿ ಮತ್ತು ಪ.ಪಂಗಡಗಳ ಕಲ್ಯಾಣ ಸಂಸ್ಥೆ/ಡಿಪ್ಲೊಮೊ ಇಂಜಿನಿಯರುಗಳ ಸಂಘ/ ಕ.ವಿ.ಪ್ರ.ನಿ.ನಿ/ಎಸ್ಕಾಂ ಪ.ಜಾತಿ ಮತ್ತು ಪ.ಪಂಗಡಗಳ ಅಧಿಕಾರಿಗಳ ಸಂಘ, ಬೆಂಗಳೂರು ರವರುಗಳ ಮಾಹಿತಿಗಾಗಿ.

ಅನುಬಂಧ

ಬೆವಿಕಂ/ಬಿಸಿ-31/35/2016-17/721 ದಿನಾಂಕ: 30 DEC 2016

## ನೂತನವಾಗಿ ರಚಿಸಲಾದ ವಲಯ ಕಛೇರಿಗೆ ಮಂಜೂರು ಮಾಡಲಾದ ಸಿಬ್ಬಂದಿ ವಿವರಗಳು

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಹಾಲಿ ಬೆಂ.ಮ.ಕ್ಷೇ ವಲಯ ಕಛೇರಿಯಿಂದ ಸ್ಥಳಾಂತರಗೊಂಡ ಹುದ್ದೆಗಳು | ಹೊಸದಾಗಿ ಮಂಜೂರಾದ ಹುದ್ದೆಗಳು | ಒಟ್ಟು ಮಂಜೂರಾದ ಹುದ್ದೆಗಳು |
|---|---|---|---|---|
| 1 | ಮುಖ್ಯ ಇಂಜಿನಿಯರ್(ವಿ) | 0 | 1 | 1 |
| 2 | ಅಧೀಕ್ಷಕ ಇಂಜಿನಿಯರ್(ವಿ) | 0 | 1 | 1 |
| 3 | ಲೆಕ್ಕನಿಯಂತ್ರಣಾಧಿಕಾರಿ | 0 | 1 | 1 |
| 4 | ಕಾರ್ಯನಿರ್ವಾಹಕ ಇಂಜಿನಿಯರ್(ಮಾ.ಪ) | 0 | 1 | 1 |
| 5 | ಕಾರ್ಯನಿರ್ವಾಹಕ ಇಂಜಿನಿಯರ್(ಸಿವಿಲ್) | 0 | 1 | 1 |
| 6 | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) | 0 | 2 | 2 |
| 7 | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಸಿವಿಲ್) | 0 | 4 | 4 |
| 8 | ಆಪ್ತ ಕಾರ್ಯದರ್ಶಿ | 0 | 1 | 1 |
| 9 | ಲೆಕ್ಕಾಧಿಕಾರಿ | 0 | 1 | 1 |
| 10 | ಹಿರಿಯ ಆಪ್ತ ಸಹಾಯಕ | 0 | 2 | 2 |
| 11 | ಸಹಾಯಕ ಇಂಜಿನಿಯರ್(ವಿ) | 0 | 2 | 2 |
| 12 | ಸಹಾಯಕ ಲೆಕ್ಕಾಧಿಕಾರಿ | 1 | 0 | 1 |
| 13 | ಕಿರಿಯ ಇಂಜಿನಿಯರ್(ವಿ) | 0 | 2 | 2 |
| 14 | ಕಿರಿಯ ಇಂಜಿನಿಯರ್(ಸಿವಿಲ್) | 0 | 1 | 1 |
| 15 | ಹಿರಿಯ ಸಹಾಯಕ | 3 | 0 | 3 |

| | | | | |
|---|---|---|---|---|
| 16 | ಸಹಾಯಕ | 5 | 0 | 5 |
| 17 | ಕಿರಿಯ ಸಹಾಯಕ | 4 | 0 | 4 |
| 18 | ದಫೇದಾರ | 3 | 0 | 3 |
| 19 | ದಪ್ತರಿ | 1 | 1 | 2 |
| 20 | ಕಛೇರಿ ಪರಿಚಾರಕ ದರ್ಜೆ-2 | 2 | 3 | 5 |
| 21 | ಶುಚಿಗಾರ್ತಿ | 0 | 2 | 2 |
| | **ಒಟ್ಟು** | **19** | **26** | **45** |

**ಸೂಚನೆ:** ಕ್ರಮ ಸಂಖ್ಯೆ 7 ರಲ್ಲಿ ಮಂಜೂರು ಮಾಡಲಾದ ನಾಲ್ಕು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಸಿವಿಲ್) ಹುದ್ದೆಗಳಲ್ಲಿ ಒಂದನ್ನು ಹೊಸದಾಗಿ ರಚಿಸಲಾದ ಕಾರ್ಯ ಮತ್ತು ಪಾಲನಾ ವಲಯ ಕಛೇರಿಗೆ ಹಾಗೂ ಉಳಿದ ಮೂರು ಹುದ್ದೆಗಳನ್ನು ತಲಾ ಒಂದರಂತೆ ಬೆಂಗಳೂರು ದಕ್ಷಿಣ, ಪೂರ್ವ ಮತ್ತು ಪಶ್ಚಿಮ ವೃತ್ತಗಳಿಗೆ ತೊಡಗಿಸುವುದು.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಅಧಿಕ ಪ್ರಭಾರ
ಬೆ.ವಿ.ಕಂ., ಬೆಂಗಳೂರು